

# ನಕ್ಕುಬಿಡಿ



**ತಕ್ಕ ಶಾಸ್ತಿ!**

ಪತಿ–ಪತ್ನಿಯ ನಡುವೆ ಘೋರ ವಾಗ್ವಾದ ನಡೆಯಿತು. ಪತ್ನಿ ತನ್ನ ತಾಯಿಗೆ ಫೋನಾಯಿಸಿ ತಿಳಿಸಿದಳು' ಅವರು ನನ್ನ ಸಂಗಡ ಜಗಳವಾಡಿದರು; ನಾನು ನಿಮ್ಮಲ್ಲಿಗೆ ಬರುತ್ತಿದ್ದೇನೆ.'

ತಾಯಿ: ಬೇಡ ಮಗಳೇ, ಅವನು ಮಾಡಿದ ತಪ್ಪಿಗೆ ಅವನೇ ಶಿಕ್ಷೆ ಅನುಭವಿಸಬೇಕು; ನಾನೇ ನಿಮ್ಮಲ್ಲಿಗೆ ಬರುತ್ತಿದ್ದೇನೆ!

★★★

**ಅಳವಡಿಸುವಿಕೆ...**

ಸಂತಾ: ಕಂಪ್ಯೂಟರಿಗಾಗಿ ನನಗೊಂದು ಸುತ್ತಿಗೆ ಮತ್ತು ಮೊಳೆ ಬೇಕಾಗಿದೆ.

ಸೇಲ್ಸ್‌ಮ್ಯಾನ್: ಕಂಪ್ಯೂಟರಿನಲ್ಲಿ ಈ ಸಾಮಾನುಗಳದ್ದೇನು ಕೆಲಸ?

ಸಂತಾ: ನನ್ನ ಕಂಪ್ಯೂಟರಿನಲ್ಲಿ ವಿಂಡೋಸ್ ಎಕ್ಸ್ ಪಿ ಇನ್‌ಸ್ಟಾಲ್ ಮಾಡಲಿಕ್ಕಿದೆ ಮಾರಾಯ!

★★★

**ತಪ್ಪೆಣಿಕೆ!**

ಸಂತಾ ಗಡಿಬಿಡಿಯಲ್ಲಿ ಸಾರಿಗೆ ನಿಯಮಕ್ಕೆ ವಿರುದ್ಧವಾಗಿ ರಸ್ತೆಯ ಬಲಭಾಗದಲ್ಲಿ ಕಾರು ಚಲಾಯಿಸುತ್ತಾ ಸಾಗುತ್ತಿದ್ದನು. ಫುಟ್‌ಪಾತ್‌ನತ್ತ ದೃಷ್ಟಿ ಹರಿಯುತ್ತಲೇ, 'ಛೆ, ಇಂದು ಕೂಡಾ ತಡವಾಗಿ ಹೋಯಿತು, ಜನರೆಲ್ಲಾ ಹಿಂತಿರುಗಿ ಹೋಗುತ್ತಿದ್ದಾರೆ...' ಎಂದು ಚಡಪಡಿಸಿ ಗೊಣಗ ತೊಡಗಿದನು!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

**ಸಾಫ್ಟ್‌ವೇರ್ ಲವ್ ಸ್ಟೋರಿ**

ನಾನು ಹನ್ನೆರಡನೇ ಸ್ಟ್ಯಾಂಡರ್ಡ್‌ನಲ್ಲಿ ಓದುತ್ತಿದ್ದೆ; ಅವಳೂ ನನ್ನ ಜೊತೆಯಲ್ಲೇ ಹನ್ನೆರಡನೇ ಸ್ಟ್ಯಾಂಡರ್ಡ್‌ನಲ್ಲಿ ಓದುತ್ತಿದ್ದಳು.

ನಾನು ಬಿಇ. ಕೋರ್ಸ್‌ಗೆ ಸೇರಿದೆ; ಅವಳು ಬಿಎಸ್ಸಿ. ಕೋರ್ಸಿಗೆ ಸೇರಿದಳು.

ನಾನು ಇನ್ನೂ ಬಿಇ ಓದುತ್ತಿದ್ದೆ; ಅಷ್ಟರಲ್ಲಿ ಅವಳು ಎಂಎಸ್ಸಿ ಮುಗಿಸಿಯೇಬಿಟ್ಟಳು.



ನಾನು ಇನ್ನೂ ಬಿಇ ಕಂಪ್ಲೀಟ್ ಮಾಡಿರಲಿಲ್ಲ; ಆದರೆ ಅವಳು ಪಿಎಚ್‌ಡಿ ಮಾಡುತ್ತಿದ್ದಳು.

ನಾನು ಬಿಇ ಮುಗಿಸಿದೆ; ಅವಳು ಡಾಕ್ಟರೇಟ್ ಪಡೆದುಕೊಂಡಳು.

ನಾನು ಎಂ.ಟೆಕ್‌ನ ಎಂಟ್ರನ್ಸ್ ಎಕ್ಸಾಮ್‌ಗೆ ಪ್ರಿಪೇರ್ ಆಗುತ್ತಿದ್ದೆ. ಅವಳು ಇನ್ನೊಬ್ಬನನ್ನು ಮದುವೆಯಾದಳು.

ನಾನು ಎಂ.ಟೆಕ್ ಮಾಡುತ್ತಿದ್ದೇನೆ; ಆಕೆ ಈಗ ಎರಡು ಮಕ್ಕಳ ತಾಯಿಯಾಗಿದ್ದಾಳೆ.

ನಾನು ಎಂ.ಟೆಕ್ ಮುಗಿಸಿದೆ; ಅವಳ ಮಗಳು ಫಸ್ಟ್ ಸ್ಟ್ಯಾಂಡರ್ಡ್‌ಗೆ ಸೇರಿಕೊಂಡಳು.

ನಾನು ಸಾಫ್ಟ್‌ವೇರ್ ಕಂಪೆನಿಯೊಂದಕ್ಕೆ ಕೆಲಸಕ್ಕೆ ಸೇರಿಕೊಂಡೆ. ಆಕೆಯ ಮಗಳು ಟೆಂತ್ ಸ್ಟ್ಯಾಂಡರ್ಡ್ ಮುಗಿಸಿದಳು.

ಇವೊತ್ತು ನನ್ನ ಜೀವನದ ಅತ್ಯಂತ ದುರ್ವಿಧಿ ಸ್ಥಿತಿ; ವಿಧಿಯ ಅಣಕ –ವಿಡಂಬನೆ ನೋಡಿ:

ಈ ದಿನ ನನ್ನ ಮದುವೆ ಎಂಗೇಜ್‌ಮೆಂಟ್ ನಡೆಯುತ್ತಿದೆ; ವಧು: ಆಕೆಯ ಮಗಳು!

**(ಸಂಗ್ರಹ) ಕೆ.ಜಯಮ್ಮ, ಮಂಡ್ಯ**


Ayurwin®
Power of Nature

www.ayurwin.com
info@ayurwin.com
Like us on /AyurwinIndia

ಆಯುರ್ವಿನ್
ನ್ಯೂಟ್ರಿಸ್ಲಿಮ್+

"ನಾನು House Wife. ನನ್ನ ದೇಹದ ತೂಕ ಹೆಚ್ಚಾಗಿ ಸ್ಲಿಮ್ ಆಗಲು ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾದವು. ಫೈನಲಿ, ಟಿ.ವಿಯಲ್ಲಿ ನ್ಯೂಟ್ರಿಸ್ಲಿಮ್ ಆ್ಯಡ್ ನೋಡಿ, ನ್ಯೂಟ್ರಿಸ್ಲಿಮ್ ಉಪಯೋಗಿಸಲು ಶುರು ಮಾಡಿದೆ. ಕೆಲವೇ ವಾರಗಳಲ್ಲಿ ನ್ಯೂಟ್ರಿಸ್ಲಿಮ್‌ನಿಂದ ಆಶ್ಚರ್ಯಕರವಾದ ಸ್ಲಿಮ್ ಆದ ದೇಹ ನನ್ನದಾಯಿತು ನೀವೆ ನೋಡಿ!

I am so Happy Now."




ನ್ಯೂಟ್ರಿಸ್ಲಿಮ್+ ಪೌಡರ್  ನ್ಯೂಟ್ರಿಸ್ಲಿಮ್+ ಕ್ಯಾಪ್ಸೂಲ್ಸ್

ಮೆಡಿಕಲ್ಸ್ ಹಾಗೂ ಅಪೋಲೋ ಫಾರ್ಮಸಿಗಳಲ್ಲಿ ದೊರೆಯುತ್ತದೆ.
9342511911, 9343458333